ಸಿ.ಸಿ..ನಂ.17/2022

ಪಿ.ಡಬ್ಲ್ಯೂ-7

ದಿನಾಂಕ.14-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

<u>**ಪಾಟೀ ಸವಾಲುಃ**</u> **ಆರೋಪಿ ಪರ ಶ್ರೀ ಎನ್ ಆರ್ ಎನ್ ವಕೀಲರಿಂದಃ**

1. ಸದ್ರಿ ಪ್ರಕರಣದ ಮಾಹಿತಿ ನಮ್ಮ ಕ್ಷೇತ್ರ ಸಿಬ್ಬಂದಿಯಾದ ಉಪ ವಲಯಅರಣ್ಯಾಧಿಕಾರಿ ಚಾಸಾ ಬಂದಿರುತ್ತದೆ . ಚಾಸಾ -1 ರವರಿಗೆ ಮಾಹಿತಿ ಬಂದ ಬಗ್ಗೆ ನೀವು ದೃಢ ಪಡಿಸಿಕೊಂಡಿರುತ್ತೀರಾ ಎಂದರೆ ಹೌದು . ನನ್ನ ತನಿಖೆ ಕಾಲಕ್ಕೆ ನಾನು ಅದರ ಬಗ್ಗೆ ದೃಢ ಪಡಿಸಿಕೊಂಡಿರುತ್ತೇನೆ . ಪ್ರಕರಣ ದಾಖಲು ಆಗಿದ್ದರ ಬಗ್ಗೆ ನಿಮಗೆ ಎಷ್ಟು ಗಂಟೆಗೆ ತಿಳಿದು ಬಂದಿರುತ್ತದೆ ಎಂದರೆ ನನಗೆ ಮಧ್ಯಾಹ್ನ ತಿಳಿದು ಬಂದಿರುತ್ತದೆ . ಪೋನ್ ಮುಖಾಂತರ ಗೊತ್ತಾಗಿರುತ್ತದೆ . ಸದ್ರಿ ಮಾಹಿತಿಯು ಪೋನ ಮುಖಾಂತರ ಎಷ್ಟು ಗಂಟೆಗೆ ಬಂದಿರುತ್ತದೆ ಎಂದು ನನಗೆ ಹೇಳಲಾಗುವುದಿಲ್ಲ . ಸದ್ರಿ ಪ್ರ .ವ .ವರದಿ ಯನ್ನು ಚಾಸಾ -1 ರವರು ದಾಖಲಿಸಿರುತ್ತಾರೆ ಎಷ್ಟು ಗಂಟೆಗೆ ಎಂದು ನನಗೆ ಹೇಳಲು ಆಗುವುದಿಲ್ಲ . ನಾನು ಈ ಪ್ರಕರಣ ದ ಪ್ರತ್ಯಕ್ಷ ದರ್ಶಿ ಅಲ್ಲ . ಎಲ್ಲಿ ಹಿಡಿದು ಏನನ್ನು ಹಿಡಿದರು ಎಂದು ನಾನು ಕ್ಷೇತ್ರ ಸಿಬ್ಬಂದಿಯಿಂದ ಕೇಳಿ ತಿಳಿದುಕೊಂಡಿರುತ್ತೇನೆ ಯಾವ ಯಾವ ಆರೋಪಿಗಳನ್ನು ಎಲ್ಲೆಲ್ಲಿ ಹಿಡಿದಿರುತ್ತಾರೆ ಎಂದು ನಾನು ಸ್ವತಃ ನೊಡಿಲ್ಲ . ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯಗಳು ಘಟನೆ ಸಬಂಧಿಸಿದಂತೆ ನೀವು ಕೇಳಿ ತಿಳಿದು ಕೊಂಡದ್ದು ಎಂದರೆ ಹೌದು .

2. ಈ ಪ್ರಕಣದಲ್ಲಿ ಹೇಳಲಾದ ತಲೆ , ಕಾಲು , ಕರಳು ,ಚರ್ಮ, ಕುತ್ತಿಗೆ ಈ ಎಲ್ಲಾ ಪರಿಕರಗಳನ್ನು ಹೇಗೆ ಯಾವುದರಲ್ಲಿ ತಂದಿದ್ದರು ಎಂದರೆ ಅವುಗಳನ್ನು ಜೀಪ ದಲ್ಲಿ ತಂದು ನನ್ನ ಮುಂದೆ ಹಾಜರು ಪಡಿಸಿರುತ್ತಾರೆ . ಸದ್ರಿ ಪರಿಕರಗಳನ್ನು ಶೀಲು ಮಾಡಿ ಬಟ್ಟೆ ಸಮೇತ ಅರಗಿನ ಶೀಲು ಹಾಕಿ ನನ್ನ ಮುಂದೆ ಹಾಜರ ಪಡಿಸಿಲ್ಲ . ಅವುಗಳನ್ನು ಪಂಚನಾಮೆ ಕಾಲಕ್ಕೆ ಶೀಲು ಮಾಡಿರಲಿಲ್ಲ ಹಾಗೆ ತಂದಿದ್ದರು. ಸದ್ರಿ ಮೇಲ್ಕಂಡ ಪರಿಕರಗಳನ್ನು ಚೀಲ ದಲ್ಲಿ ತಂದ್ದಿದರು ಪ್ಲಾಸ್ಟಿಕ್ ಕವರ ದಲ್ಲಿ ತಂದಿದ್ದರು ಎಂದರೆ

ನಾನು ಅವುಗಳನ್ನೆಲಾ ನೋಡಿರುವುದಿಲ್ಲ. ಸದ್ರಿ ಪರಿಕರಗಳನ್ನು ನಿಮ್ಮ ಸಿಬ್ಬಂದಿಗಳು ಕೈಯಲ್ಲಿ ಹಿಡಿದು ಕೊಂಡು ತಂದಿರುತ್ತಾರಾ ಎಂದರೆ ಚೀಲದಲ್ಲಿ ತಂದಿರುತ್ತಾರೆ . ಪಂಚನಾಮೆ ಕಾಲಕ್ಕೆ ಸದ್ರಿ ಪರಿಕರ ಗಳ ಮೇಲೆ ಪಂಚರ ಸಹಿ ವುಳ್ಳ ಚೀಟಿಯನ್ನು ಆ ಚೀಲದ ಮೇಲೆ ಅಂಟಿಸಿ ಮತ್ತು ಉಳಿದ ಸಿಬ್ಬಂದಿಗಳ ಸಹಿ ಪಡೆದುಕೊಂಡು ತಂದಿರುತ್ತಾರೊ ಇಲ್ಲವೊ ಎಂದರೆ ನಾನು ಗಮನಿಸಿಲ್ಲ. ನೀವು ತನಿಖಾಧಿಕಾರಿ ಯಾಗಿರುವುರಂದ ಆ ಎಲ್ಲಾ ಪರಿಕರಗಳನ್ನು ನಿಮ್ಮ ಮುಂದೆ ಹಾಜರು ಪಡಿಸಿದಾಗ ಅವರು ಹಾಜರು ಪಡಿಸಿದ ಪರಿಕರಗಳನ್ನು ಪಂಚನಾಮೆ ಮುಖಾಂತರ ಅಮಾನತ್ತು ಪಡಿಸಿಕೊಂಡು ಪಂಚನಾಮೆ ಕಾಲಕ್ಕೆ ಇದ್ದವರ ಸಹಿ ಯನ್ನು ಪಡೆದು ಕೊಂಡಿರುತ್ತಾರೊ ಇಲ್ಲವೊ ಎಂದು ಪರಿಶೀಲನೆ ಮಾಡುವ ಅಗತ್ಯತೆ ಇರುತ್ತದೆಯೊ ಇಲ್ಲವೊ ಎಂದರೆ ನಾವು ಅರಣ್ಯ ಸಿಬ್ಬಂದಿಯಾಗಿರುವುದರಿಂದ ಕಾಡಿಗೆ ಹೋಗುವುದರಿಂದ ಕಾಡಿನಲ್ಲಿ ಶೀಲು ಮತ್ತು ಇತರ ಪರಿಕರಗಳನ್ನು ಇಟ್ಟು ಕೊಂಡು ಹೋಗುವುದಿಲ್ಲ .

3. ದಾಳಿಗೆ ಹೋದರೂ ಎನ್ನಲಾದ ಸಿಬ್ಬಂದಿಗಳು ಕಾಡಿನಿಂದಲೆ ಹೋಗಿರುತ್ತಾರೆ ಕಚೇರಿಯಿಂದ ಹೋಗಿಲ್ಲ . ಅವರು ಎಲ್ಲಿಂದ ಹೋಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ನಿಮ್ಮ ತನಿಖೆಯ ಕಾಲಕ್ಕೆ ದಾಳಿಗೆ ಹೋದರು ಎನ್ನಲಾದ ಸಿಬ್ಬಂದಿಗಳು ಎಲ್ಲಿಂದ ತಮ್ಮ ಕಾರ್ಯಾಚರಣೆಯನ್ನು ಪ್ರಾರಂಭಸಿರುತ್ತಾರೆ ಎಂದು ತಿಳಿದು ಕೊಂಡಿರುತ್ತಿರೊ ಇಲ್ಲವೊ ಎಂದರೆ ತಿಳಿದು ಕೊಂಡಿರುತ್ತಿರುತ್ತೇನೆ . ಅವರು ತಮ್ಮ ಕಾರ್ಯಾಚರಣೆಯನ್ನು ರಾಷ್ಟ್ರೀಯ ಹೆದ್ದಾರಿ –63 ರಿಂದ ಪ್ರಾರಂಭವಾಗಿರುತ್ತದೆ . ರಾಷ್ಟ್ರೀಯ ಹೆದ್ದಾರಿ –63 ರಲ್ಲಿ ಯಾವ ಯಾವ ಸಿಬ್ಬಂದಿಗಳು ಎಲ್ಲಿಂದ ಹೋಗಿರುತ್ತಾರೆ ಎಂದರೆ ಇಲಾಖಾ ವಾಹನ ಮತ್ತು ಬೈಕ ದಲ್ಲಿ ಹೋಗಿರುತ್ತಾರೆ . ಚಾಸಾ –1 ರವರು ಸದ್ರಿ ಕಾರ್ಯಾಚರನೆಯನ್ನು ಎಲ್ಲಿಂದ ಪ್ರಾರಂಭಸಿರುತ್ತಾರೆ ಎಂದು ಹೇಳಿಕೆ ಕೊಟ್ಟಿರುತ್ತಾರೆ . ಈ ಎಲ್ಲಾ ಸಿಬ್ಬಂದಿಗಳು ಎಲ್ಲೆಲ್ಲಿ ಇದ್ದರು ಎಲ್ಲಿ ಒಟ್ಟಾಗಿ ಸೇರಿರುತ್ತಾರೆ ಎಂದು ನಾನು ಕೇಳಿ ತಿಳಿದುಕೊಂಡಿಲ್ಲ . ನನ್ನ ಮುಂದೆ ಹಾಜರ ಪಡಿಸಿದ

ಕಡವೆಯ ತಲೆ ಕಾಲು , ಕರಳು ಚರ್ಮ ಹಾಗೂ ಸತ್ತ ಭ್ರೂಣ ಇವೆಲ್ಲವು ರಕ್ತ ಸಿಕ್ತ ವಾಗಿತ್ತಾ ಎಂದರೆ ನನಗೆ ಗೊತ್ತಿಲ್ಲ .

3. ಗನ್ ಹೂಗಿದ ಸ್ಥಿತಿಯಲ್ಲಿ ಇತ್ತು ಎಂದು ಹೇಳಿರುತ್ತಿರಿ ಅದು ಮಣ್ಣಿನಿಂದ ಕೂಡಿತ್ತೊ ಅಥವಾ ಅದನ್ನು ತೊಳೆದು ಹಾಜರ ಪಡಿಸಿರುತ್ತಾರಾ ಎಂದರೆ ನನಗೆ ಅಷ್ಟೊಂದು ನೆನಪಿಲ್ಲ. ನನ್ನ ಮುಂದೆ ಹಾಜರು ಪಡಿಸಿದ ಎಲ್ಲಾ ಪರಿಕರಗಳನ್ನು ನಾನು ಸರಿಯಾಗಿ ಪರಿಶೀಲನೆ ಮಾಡಿರುತ್ತೇನೆ . ಗನ್ ಗೆ ಮಣ್ಣು ತಾಗಿದ್ದರೆ ಅದು ಬೇಗನೆ ತುಕ್ಕು ಹಿಡಿಯುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ನನ್ನ ಮುಂದೆ ಹಾಜರ ಪಡಿಸಿದ ಗನ್ ನ ನಳಿಕೆ ಮತ್ತು ಕಿವಿಯ ಒಳಗಡೆ ಮಣ್ಣು ಸೇರಿರುತ್ತಯೋ ಇಲ್ಲವೊ ಎಂದು ತನಿಖೆ ಮಾಡಿರುತ್ತಿರೊ ಇಲ್ಲವೊ ಎಂದರೆ ಅದು ಲೋಡೆಡ ಗನ್ ಆಗಿತ್ತು . ಷದ್ರಿ ಗನ್ ನ ನಳಿಕೆ ಮತ್ತು ಕಿವಿಯ ಒಳಗಡೆ ಮಣ್ಣು ಇತ್ತು ಎಂದು ಹಾಳಿದಂತೆ ಅದನ್ನು ಪರಿಶೀಲನೆ ಮಾಡಿ ನೋಡಿರುತ್ತೀರಾ ಎಂರೆ ಪರಿಶೀಲನೆ ಮಾಡಿ ನೋಡಿರುತ್ತೇನೆ ಅದರೆ ಮಣ್ಣು ಇತ್ತೊ ಇಲ್ಲವೊ ಎಂದು ನನಗೆ ನೆನಪಿಗೆ ಬರುತ್ತಿಲ್ಲ ಅದು ಲೋಡೆಡ ಗನ್ ಆ ಗಿತ್ತು . ಷದ್ರಿ ಗನ್ ವನ್ನು ಯಾರ ತೋಟದಲ್ಲಿ ಎಷ್ಟು ಆಳದ ವರೆಗೆ ಹುಗಿದಿರುತ್ತಾರೆ ಎಂದು ನೀವು ತನಿಖೆ ಮಾಡಿರುತ್ತೀರಾ ಎಂದರೆ ಅದನ್ನೆಲಾ ನಾನು ನೊಡಿಲ್ಲ ಆದರೆ ಗನ್ ಹುಡಿದಿಡಲಾಗಿತ್ತು ಎಂದು ತನಿಖೆ ಕಾಲಕ್ಕೆ ಬರೆದಿರುತ್ತೇನೆ ಅದು ಮಾಲ್ಕಿ ಜಮೀನು ಆಗಿತ್ತು ಮಾಲ್ಕಿ ಜಮೀನುದಾರರ ಕಾಗದ ಪತ್ರಗಳನ್ನು ಅಥವಾ ಆರ್ ಟಿ ಸಿ ಯನ್ನು ನೀವು ಪಡೆದುಕೊಂಡಿರುತ್ತೀರಾ ಎಂರೆ ಇಲ್ಲ. ಮಾಲ್ಕಿ ಜಮಿನುದಾರರು ಯಾರು ಎಂದು ಮತ್ತು ಅದರ ಸರ್ವೆ ನಂಬರ ಯಾವುದು ಎಂದು ತನಿಖೆ ಕಾಲಕ್ಕೆ ನಮೂದು ಮಾಡಿರುತ್ತೀರಾ ಎಂದರೆ ಸರ್ವೆ ನಂಬರ ನಮೂದು ಮಾಡಿಲ್ಲ . ಆದರೆ ಮಾಲ್ಕಿ ದಾರರ ಹೆಸರನ್ನು ನಮೂದು ಮಾಡಿರುತ್ತೇನೆ . ಈ ಎಲ್ಲಾ ಘಟನೆ ಸಂಬಂಧಿಸಿದಂತೆ ನೀವು ತನಿಖೆ ಕೈಗೊಂಡಿಲ್ಲ ಕೇವಲ ಇಲಾಖೆಯ ಕಚೇರಿಯಲ್ಲಿ ಕುಳಿತುಕೊಂಡು ತಮ್ಮ ಇಲಾಖಾ ಸಿಬ್ಬಂದಿಗಳು ಸಲ್ಲಿಸಿದ ವರದಿಗೆ ತಕ್ಕಂತೆ ಅನೂಕೂಲವಾಗಲಿ ಎಂದು ತನಿಖಾ ವರದಿ ಸಲ್ಲಿಸಿರುತ್ತಿರಿ ಎಂದರೆ

ಸರಿಯಲ್ಲ . ನನ್ನ ಮುಂದೆ ಹಾಜರು ಪಡಿಸಿದ್ದರೂ ಎನ್ನಲಾದ ಸತ್ತ ಕಡವೆ ತಲೆ ಭ್ರೂಣ , ಚರ್ಮ ಕಾಲುಗಳು, ಕರಳು ಇವುಗಳ ಸ್ಯಾಂಪಲ್ ಗಳನ್ನು ತೆಗೆದಿರುತ್ತೇವೆ. ಪಶು ವೈದಾಧಿಕಾರಿಗಳನ್ನು ಸಿಬ್ಬಂದಿಗಳು ಕರೆಸಿರುತ್ತಾರೆ ಯಾವ ಸಿಬ್ಬಂದಿ ಕರೆಸಿದ್ದರು ಎಂರೆ ವಲಯ ಅರಣ್ಯಾಧಿಕಾರಿ ಕರೆಸಿದ್ದರು . ವಲಯ ಅರಣ್ಯಾಧಿಕಾರಿಗಳು ಅವುಗಳ ಸ್ಯಾಂಪಲ್ ಪಡೆಯುವಾಗ ಅವರ ಸಹಿಯನ್ನು ಹಾಕಿರುತ್ತಾರಾ ಎಂದರೆ ಇಲ್ಲ . ಸತ್ತ ಕಡೆಯ ಚರ್ಮ , ತಲೆ , ಕರಳು , ಸತ್ತ ಭ್ರೂಣವನ್ನು ಹಾಗೂ ಕಾಲುಗಳನ್ನು ತೂಕಮಾಡಿ ಅಮಾನತ್ತು ಪಡಿಸಿಕೊಡಿರುತ್ತಾರಾ ಎಂದರೆ ಮಾಂಸ ತೂಕ ಮಾಡಿರುತ್ತಾರೆ ಅದು 7 ಕೆಜಿ ಇತ್ತು . ಮಾಂಸ ಎಲ್ಲಿ ತೂಕ ಮಾಡಿರುತ್ತಾರೆ ಎಂದು ನನ್ನ ತನಿಖೆ ಕಾಲಕ್ಕೆ ನನಗೆ ಗೊತ್ತಿಲ್ಲ . ನನ್ನ ಮುಂದೆ ಆ ಪರಿಕರಗಳನ್ನು ಹಾಜರ ಪಡಿಸಿದಾಗ ಅವುಗಳನ್ನು ತೂಕ ಮಾಡುವ ಬಗ್ಗೆ ತೂಕ ಮಾಡುವ ಪರಿಕರಗಳನ್ನು ನಾನು ತರಿಸಿಲ್ಲ.

4. ವೈದ್ಯಾಧಿಕಾರಿಗಳು ಸ್ಯಾಂಪಲ್ ತೆಗೆದುಕೊಡಾಗ ಅದರ ಮೇಲೆ ಇರುವ ವೈದ್ಯಾಧಿಕಾರಿಗಳ ಶೀಲು ಮತ್ತು ಸಹಿಯನ್ನು ನೀವು ಪರಿಶೀಲನೆ ಮಾಡಿರುತ್ತೀರಾ ಎಂದರೆ ಅವರು ಸಹಿಯನ್ನು ಮಾಡಿರುತ್ತಾರೆ . ಅವರ ಶೀಲು ಮತ್ತ ಸಹಿಯನ್ನು ಪರಿಶೀಲನೆ ಮಾಡಿರುತ್ತೀರಾ ಎಂದರೆ ಸಹಿ ಪರಿಶೀಲನೆ ಮಾಡಿರುತ್ತೇನೆ ಶೀಲು ಕೂಡ ಅವರದ್ದೆ ಇರುತ್ತದೆ . ಸ್ಯಾಂಪಲ್ ತೆಗೆದುಕೊಟ್ಟರು ಎಂದು ಹೇಳಲಾದ ವರದಿ ಮೇಲೆ ವೈದ್ಯಾಧಿಕಾರಿಗಳ ಶಿಲು ಮತ್ತು ಸಹಿ ಇರುವುದಿಲ್ಲ ಅವರ ವರದಿ ಮಾತ್ರ ಇರುತ್ತದೆ . ವೈದ್ಯಾಧಿಕಾರಿಗಳು ಸ್ಥಳಕ್ಕೆ ಬಂದು ಯಾವುದೇ ಸ್ಯಾಂಪಲ್ ವನ್ನು ತೆಗೆದು ಕೊಟ್ಟದ್ದು ಇಲ್ಲ ಸದ್ರಿ ವೈದ್ಯಾಧಿಕಾರಿಗಳು ಸ್ಯಾಂಪಲ್ ತೆಗೆದುಕೊಟ್ಟಿರುತ್ತಾರೆ ಎಂದು ನೀವು ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ.

5. ನನ್ನ ತನಿಖೆ ಕಾಲಕ್ಕೆ ಒಂದು ಸಿಡಿ ಯನ್ನು ನಮ್ಮ ಸಿಬ್ಬಂದಿ ಕಡೆಯಿಂದ ತೆಗೆದುಕೊಂಡಿರುತ್ತೇನೆ . ಸದ್ರಿ ಸಿಡಿಯ ಮೂಲ ಪ್ರತಿ ಎಲ್ಲಿ ಇರುತ್ತದೆ ಎಂರೆ ಸದ್ರಿ ಮೂಲ ಪ್ರತಿಯನ್ನು ನನ್ನ ಕಡತದಲ್ಲಿ ಇರಿಸಲಾಗಿರುತ್ತದೆ . ಮತ್ತು ನ್ಯಾಯಾಲಯದ ಕಡತದಲ್ಲಿ ಒಂದನ್ನು ಇಡಲಾಗಿರುತ್ತದೆ . ಸಿಡಿಯ ಮೂಲ

ಪ್ರತಿ ಯಾವುದು ಎಂದರೆ ನನಗೆ ನೆನಪಿಲ್ಲ . ಸಿಡಿ ಯ ಮೂಲ ಪ್ರತಿ ಯಾವುದು ಎಂದು ನೀವು ಹೇಳಬಹುದಾ ಎಂದರೆ ಸಾಕ್ಷಿ ಯು ತನ್ನ ಕಡತದಲ್ಲಿರುವ ಸಿಡಿ ನೋಡಿ ಮತ್ತು ನ್ಯಾಯಾಲಯದ ಸಿಡಿ ಯುನ್ನು ನೋಡಿ ನ್ಯಾಯಾಲಯದ ಮುಂದೆ ಇರುವ ಸಿಡಿ ಮೂಲ ಪ್ರತಿ ಯಾಗಿರುತ್ತದೆ . ನನ್ನ ಬಳಿ ಯಲ್ಲಿರುವ ಸಿಡಿ HP ಕಂಪನಿಯ ಸಿಡಿಆರ್ ಎಂದು ಇರುತ್ತದೆ . ನ್ಯಾಯಾಲಯದ ಮುಂದೆ ಇರುವ ಸಿಡಿ HP ಸಿಡಿಆರ್ ಎಂದು ಇಲ್ಲ ಎಂದರೆ ಮೂಲ ಪ್ರತಿ ನ್ಯಾಯಾಲಯಕ್ಕೆ ಕೊಟ್ಟು ಅದರ ಒಂದು ಕಾಪಿ ಯನಲ್ನು ನಾವು ಇಟ್ಟು ಕೊಂಡಿರುತ್ತೇವೆ . ಕೆಲವೊಮ್ಮೆ ಕಚೆಯಲ್ಲಿ ಇರುವಂತಹ ಸಿಡಿಯನ್ನು ನಾವು ಕಾಪಿ ಮಾಡಿಕೊಂಡಿರುತ್ತೇವೆ . ನ್ಯಾಯಾಲಯದ ಮುಂದೆ ಹಾಕಿರುವ ಸಿಡಿಯ ದಿನಾಂಕ ಹಾಗೂ ನನ್ನ ಕಡತದ ಸಿಡಿಯಲ್ಲಿರುವ ದಿನಾಕ ಬೇರೆ ಬೇರೆ ಯಾಗಿರುತ್ತದೆ ಎಂದರೆ ಸರಿಯಲ್ಲ . ಒಂದೆ ರೀತಿ ಆಗಿರುತ್ತದೆ . ನ್ಯಾಯಾಲಯದ ಮುಂದೆ ಹಾಜರು ಪಡಿಸಿದ ಸಿಡಿಯ ಪ್ರಕಾರ ವಾಗಿ ಕಡತದಲ್ಲಿರುವ ಸಿಡಿ ಮತ್ತು ಆರೋಪಿಗೆ ಕೊಡುವ ಅಂತಿಮ ವರದಿಯ ಪ್ರತಿಯಲ್ಲಿರುವ ಸಿಡಿ ಒಂದೇ ತರಹ ಆಗಿರಬೇಕು ಎಂದರೆ ಅದು ಸಿಡಿಯನ್ನು ಕಾಪಿ ಮಾಡಿ ತೆಗೆದುಕೊಳ್ಳಲಾದ ಒಂದು ಕಾಪಿ ಆಗಿರುವುರಿಂದ ಸಿಡಿ ಕಂಪನಿಗಳು ಬೇರೆ ಬೇರೆ ಯಾಗಿಬಹುದು ಅದರೆ ಮೂಲ ಪ್ರತಿಯಲ್ಲಿರುವ ಪೊಟೊ ಗಳು ಸದ್ರಿ ಸಿಡಿ ಪ್ರತಿಯಲ್ಲಿ ಬಂದಿರುತ್ತದೆ . ನ್ಯಾಯಾಲಯದ ಮುಂದೆ ಹಾಜರು ಪಡಿಸಿದ ಸಿಡಿಯಲ್ಲಿಯೂ ಹಾಗೂ ನಿಮ್ಮ ಕಡತದಲ್ಲಿಇರುವ ಸಿಡಿಯಲ್ಲಿ ಸದ್ರಿ ಸಿಡಿಯನ್ನು ಯಾರು ತೆಗೆದಿರುತ್ತಾರೆ ಎಂದು ಅವರ ಸಹಿ ತೆಗೆದುಕೊಡಿರುವುದಿಲ್ಲ ಎಂದರೆ ಅವರ ಸಹಿ ತೆಗೆದುಕೊಂಡಿಲ್ಲ . . ಸಿಡಿ ಮೇಲೆ ಬರೆದು ಕೊಂಡಿರುವ ವಿಷಯದಂತೆ ಅವರುಗಳ ಸಹಿಯನ್ನು ಪಡೆದುಕೊಳ್ಳಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ . ಸದ್ರಿ ಸಿಡಿಯನ್ನು ಯಾರು ತೆಗೆದಿರುತ್ತಾರೆ ಎಂದು ಆ ಸಿಡಿಯನ್ನು ತೆಗೆದವರ ಹಾಗೂ ಪೊಟೊ ತೆಗೆದವರಿಂದ ಕಲಂ 65 ಬಿ ಭಾರತೀಯ ಸಾಕ್ಯೆ ಅಧಿನಿಯಮ ಪ್ರಕಾರ ಪ್ರಮಾಣ ಪತ್ರ– ತೆಗೆದುಕೊಂಡಿಲ್ಲ ಎಂದರೆ ಸರಿ . ಕಲಂ 65 ಬಿ ಭಾರತೀಯ ಸಾಕ್ಯೆ ಅಧಿನಿಯಮ ಪ್ರಕಾರ ಪೊಟೊ

ಮತ್ತು ಸಿಡಿಗಳನ್ನು ತೆಗೆದಿದ್ದಾನೆ ಎಂಬ ವ್ಯಕ್ತಿಯ ಪ್ರಮಾಣ ಪತ್ರ ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ . ನನ್ನ ಮುಂದೆ ಹಾಜರು ಪಡಿಸಿದ ಚರ್ಮ ಸಂಪೂರ್ಣವಾದ ಚರ್ಮ ವಾಗಿತ್ತೊ ಎಂದರೆ ಅದು ಭಾಗಶಃವಾಗಿತ್ತು .

6. ಗುಂಡು ತಗುಲಿದ ಚರ್ಮ ವನ್ನು ಹಾಜರು ಪಡಿಸಿರುತ್ತಾರೆ ಎಂದು ಹೇಳಿದಂತೆ ಆ ಚರ್ಮವನ್ನು ನೀವು ಪರೀಶಿಲನೆ ಮಾಡಿ ನೋಡಿರುತ್ತೀರಾ ಎಂದರೆ ಹೌದು . ಗುಂಡು ತಗಲಿದ ಚರ್ಮ ಕಡವೆಯ ಬಲ ಭಾಗಕ್ಕೆ ಅಥವಾ ಎಡ ಭಾಗಕ್ಕೆ ಎಲ್ಲಿ ಇತ್ತು ಎಂದು ಪರೀಶಿಲನೆಮಾಡಿ ನೋಡಿರುತ್ತಿರಾ ಎಂದರೆ ನನಗೆ ನೆನಪಿಲ್ಲ . ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದಾರೆ ಎಂದು ಹೇಳಲಾದ ಪೋಟೊ ನೋಡಿ ಕಡವೆಯ ಯಾವ ಭಾಗಕ್ಕೆ ಗುಂಡು ತಗುಲಿತ್ತು ಎಂದು ನೀವು ಹೆಳಬಹುದಾ ಎಂದರೆ ನಾ ವು ಹಾಜರು ಪಡಿಸಿದ ಪೊಟೊಗಳಲ್ಲಿ ಅದರ ಬಗ್ಗೆ ಸರಿಯಾಗಿ ಕಾಣುತ್ತಿಲ್ಲ . ಪೊಟೊನ್ನು ತೆಗೆದಿರುತ್ತಾರೆ ಎಂದು ಹೇಳಿದಂತೆ ಚರ್ಮ ದ ಗುಂಡು ತಗಲಿದೆ ಎನ್ನಲಾದ ಭಾಗದ ಪೊಟೊವನ್ನು ತೆಗೆದಿರುತ್ತಾರಾ ಎಂರೆ ಹೌದು. ನಿಮ್ಮ ಕಡತದಲ್ಲಿ ಅಥವಾ ನ್ಯಾಯಾಲಯದ ಮುಂದೆ ಹಾಜರ ಪಡಿಸಿದ ಪೊಟೊಗಳಲ್ಲಿ ಗುಂಡು ತಗಲಿದ ಚರ್ಮದ ಭಾಗವು ಕಾಣಿಸುತ್ತದೆಯಾ ಎಂದರೆ ಆ ಪೊಟೊ ಈಗ ನ್ಯಾಯಲಯದ ಮುಂದೆ ಇರುವ ಕಡತದಲ್ಲಿ ಕಾಣಿಸುತ್ತಿಲ್ಲ . ಗುಂಡು ತಗಲಿದೆ ಎನ್ನಲಾದ ಭಾಗದ ಚರ್ಮಕ್ಕೆ ಎಷ್ಟು ಅಗಲದ ತೂತು ಆಗಿತ್ತು ಎಂದರೆ ಅದು 2 ರಿಂದ 3 ಸೆಂ.ಮೀ ಅಗಲದ ತೂತು ವಾಗಿರಬಹುದು. ಷದ್ರಿ ತೂತಾದ ಚರ್ಮವು ಮಾಂಸ ಮತ್ತು ರಕ್ತದಿಂದ ಕೂಡಿತ್ತಾ ಎಂದರೆ ಗುಂಡು ತಗಲಿದ ಸುತ್ತಲೂ ಜಾಗವು ಕಪ್ಪಾಗಿತ್ತು .ಸುತ್ತಲೂ ಜಾಗವು ಕಪ್ಪಾಗಿತ್ತು ಎಂದು ಯಾವ ದಾಖಲೆಯ ಮೇಲೆ ಹೇಳುತ್ತಿದ್ದೀರಿ ಎಂದರೆ ನಾನು ನೋಡಿದಂತೆ ಹೇಳುತ್ತಿದ್ದೇನೆ . ಸುತ್ತಲೂ ಕಪ್ಪಾಗಿರುತ್ತದೆ ಎಂಬ ಬಗ್ಗೆ ನನಗೆ ನೆನಪಿರುತ್ತದೆ . ಸುತ್ತಲೂ ಕಪ್ಪಾಗಿರುವ ಭಾಗದ ಸುತ್ತಲೂ ಕೂದಲು ಇರುವ ಬಗ್ಗೆ ಪರಿಶೀಲನೆ ಮಾಡಿರುತಿರಾ ಎಂರದೆ ನನಗೆ ನೆನಪಿಗೆ ಬರುತ್ತಿಲ್ಲ . ನನ್ನ ತನಿಖೆ ಕಾಲಕ್ಕೆ ಗುಂಡು ತಗುಲಿದೆ ಎನ್ನಲಾದ ಚರ್ಮ ದ

ಭಾಗವನ್ನು ನೀವು ನೋಡಿಯೆ ಇಲ್ಲ ಎಂದರೆ ಸರಿಯಲ್ಲ . ಸುತ್ತಲೂ ಭಾಗದ ಚರ್ಮ ವು ಕಪ್ಪಾಗಿರುತ್ತದೆ ಎಂದು ನಿಮ್ಮ ತನಿಖೆ ಕಾಲಕ್ಕೆ ಪಂಚನಾಮೆ ಹಾಗೂ ಸಿಬ್ಬಂದಿಗಳ ಹೇಳಿಕೆಯಲ್ಲಿ ಹಾಗೂ ತನಿಖಾ ವರದಿಯಲ್ಲಿ ನಮೂದಿಸಿದ್ದು ಇಲ್ಲ ಎಂದರೆ ನನಗೆ ಈಗ ನೆನಪಿಗೆ ಬರುತ್ತಿಲ್ಲ . ಕಡತದಲ್ಲಿ ಅದರ ಬಗ್ಗೆ ನಮೂದು ಆಗಿರುತ್ತದೆಯಾ ಎಂದರೆ ಸಾಕ್ಷಿ ಕಡತವನ್ನು ನೋಡಿ ಇಲ್ಲ ಎಂದು ನುಡಿಯುತ್ತಾರೆ . ಸುತ್ತಲೂ ಆ ರೀತಿಯಾಗಿ ಚರ್ಮ ದ ಭಾಗವು ಕಪ್ಪಾಗಿತ್ತು ಎಂದು ನೀವು ರಾಗೇ ಸಾಕ್ಷ್ಯವನ್ನು ಹೇಳುವಾಗ ಸುಳ್ಳಾಗಿ ಹೇಳುತ್ತಿದ್ದೀರಿ ತನಿಖೆ ಕಾಲಕ್ಕೆ ಅದರ ಬಗ್ಗೆ ನಿಮಗೆ ಕಂಡು ಬಂದಿರಲಿಲ್ಲ ಎಂದರೆ ಸರಿಯಲ್ಲ .

7. ಆರೋಪಿಗಳ ಉಗುರಿನ ಮಾದರಿಯನ್ನು ತೆಗೆದುಕೊಳ್ಳಬೇಕು ಎಂದು ನಿಮ್ಮ ತನಿಖೆ ಕಾಲಕ್ಕೆ ಯಾಕೆ ನಿಮಗೆ ಅನಿಸಿತು ಎಂದರೆ ಸದ್ರಿ ಕಡವೆಯನ್ನು ಕೊಂದು ಅದರ ಮಾಂಸವನ್ನು ಮಾಡುವಾಗ ಆ ಮಾಂಸದ ತುಣುಕುಗಳು ಅವರ ಉಗುರಿನಲ್ಲಿ ಹೋಗುವ ಸಾಧ್ಯತೆ ಇರುವುದರಿಂದ ಆ ರೀತಿಯಾಗಿ ಒಂದು ಚಾನ್ಸ ತೆಗೆದುಕೊಂಡಿರುತ್ತೇನೆ . ಆ ರೀತಿ ಚಾನ್ಸ ತೆಗೆದುಕೊಳ್ಳುವುದರಿಂದ trace out ಅಗಬಹುದು ಎಂದು ಅಂದು ಕೊಂಡಿದ್ದೇವು . ಆ ರೀತಿ trace out ಮಾಡುವುದು ಕಷ್ಟ ಯಾಕೆಂದರೆ ಅವರು ಕೈ ತೊಳೆದುಕೊಡಿರುತ್ತಾರೆ . ಸದ್ರಿ ಉಗುರಿನ ಮಾದರಿಗಳನ್ನು ಕಳುಹಿಸಿ ಕೊಡುವಾಗ ನಾನು ಒಂದು ಚಾನ್ಸ ತೆಗೆದುಕೊಂಡಿರುತ್ತೇನೆ ಅವರು ಕೈಯನ್ನೆಲ್ಲಾ ತೊಳೆದುಕೊಂಡಿದ್ದರು ಎಂದು ಬರೆದು ಕಳುಹಿಸಿರುತ್ತೀರಾ ಎಂದರೆ ಇಲ್ಲ . ಅವರು ಕೈಯನ್ನೆಲ್ಲ ತೊಳೆದುಕೊಂಡಿದ್ದರು ಉಗುರಿನಲ್ಲಿ ಏನು ಇಲ್ಲ ಎಂದು ವೈದ್ಯಾಧಿಕಾರಿಗಳು ನಿಮಗೆ ತಿಳಿಸಿರುತ್ತಾರಾ ಎಂದರೆ ಆ ರೀತಿ ಏನು ನಡೆದಿಲ್ಲ . ಸಾಮಾನ್ಯವಾಗಿ ವ್ಯಕ್ತಿ ಮಾಂಸವನ್ನು ಮಾಡುವಾಗ ನಿವೇನಾದರೂ ಬಂದು ಅವರನ್ನು ಹಿಡಿಯತ್ತಿರಿ ಎಂಬ ಬಗ್ಗೆ ಅವರಿಗೆ ಗೊತಿರುವುದಿಲ್ಲ ಎಂದರೆ ಸರಿ . ಅವರ ಉಗುರಿನ ಮಾದರಿ ಯನ್ನು ಪಡೆದುಕೊಳ್ಳುವಾಗ ಉಗುರಿನಲ್ಲಿ ಕಸದ ಪದಾರ್ಥ ಗಳು ನಿಮಗೆ ಕಂಡಿರುತ್ತದೆಯಾ ಎಂದರೆ ನಾನು ಅದನ್ನೆಲ್ಲಾ ನೋಡಿಲ್ಲ ಉಗುರಿನ ಮಾದರಿ ತೆಗೆದುಕೊಡಂಡು FSL ಗೆ ಕಳುಹಿಸಿಕೊಟ್ಟಿರುತ್ತೇನೆ . ಆರೋಪಿತರ ಕೈಗಳನ್ನು ಪರಿಶೀಲನೆ

ಮಾಡಿರುತ್ತೇನೆ . ಬಟ್ಟೆಯನ್ನು ಪರಿಶೀಲನೆ ಮಾಡಿ ನೋಡಿರುತ್ತೇನೆ . ಅವರ ಬಟ್ಟೆಯನ್ನು ಪರಿಶೀಲನೆ ಮಾಡುವಾಗ ಮಾಂಸ ಚೂರುಗಳಾಗಲಿ, ಕೂದಲಾಗಲಿ ಕಂಡಿರುವುದಿಲ್ಲ ಯಾಕೆಂದರೆ ಆಗಲೆ ಒಂದು ದಿನ ವಾಗಿ ಹೋಗಿತ್ತು . ಆವರು ರಾತ್ರಿ ಮಾಂಸ ಮಾಡಿರುತ್ತಾರೆ ಮಾರನೆ ದಿನ ನಾವು ಹಿಡಿದಿರುತ್ತೇವೆ . ನನ್ನ ಪ್ರಕಾರ ನಮ್ಮ ಸಿಬ್ಬಂದಿಗಳು ಮಧ್ಯಾಹ್ನದಿಂದ ಕಾರ್ಯಾಚರಣೆ ಮಾಡಿರುತ್ತಾರೆ . ಅವರನ್ನು ನಿಖರವಾಗಿ ಎಷ್ಟು ಗಂಟೆಗೆ ಹಿಡಿದಿರುತ್ತಾರೆ ಎಂದರೆ 2–00 ಗಂಟೆಗೆ ಮಹಜರ ಮಾಡಿರುತ್ತಾರೆ ಅದೇ ಸಮಯದಲ್ಲಿ ಹಿಡಿದಿರಬಹುದು ನಿಖರವಾಗಿ ಎಷ್ಟು ಗಂಟೆಗೆ ಹಿಡಿದಿರುತ್ತಾರೆ ಎಂದು ನನ್ನ ತನಿಖೆ ಕಾಲಕ್ಕೆ ತಿಳಿದುಕೊಡಿರುವುದಿಲ್ಲ . ಉಗುರಿನ ಮಾದರಿಯ ವರದಿಯನ್ನು ನಾನು ಪರೀಶಿಲನೆ ಮಾಡಿ ನೋಡಿರುತ್ತೇನೆ . ಆ ವರದಿ ನೆಗೆಟಿವ ಎಂದು ಬಂದಿರುತ್ತದೆ ಎಂದರೆ ಸರಿ . ವರದಿಗೆ ಪೂರಕವಾಗಿ ಅದನ್ನು ಓದಿ ತಿಳಿದುಕೊಂಡು ಅವರು ಕೈ ಕಾಲುಗಳನ್ನು ತೊಳೆದುಕೊಂಡಿದ್ದರು ಎಂದು ನೀವು ಸುಳ್ಳಾಗಿ ಹೇಳುತಿದ್ದೀರಿ ಎಂದರೆ ಸರಿಯಲ್ಲ . ಆರೋೀಪಿಗಳು ಯಾವುದೆ ಬಂದೂಕನ್ನು ನೀವು ಹೇಳಲಾದ ಕೃತ್ಯಕ್ಕಾಗಿ ಉಪಯೋೀಗಿಸಿದ್ದು ಇಲ್ಲ ಮತ್ತು ಮಾಂಸ ಮಾಡಿದ್ದು ಇಲ್ಲ ಎಂದರೆ ಸರಿಯಲ್ಲ . FSL ವರದಿಯಲ್ಲಿ ಉಗುರಿನ ಒಳಗಡೆ ಕಾರ್ಬನಿಕ ಅಂಶವು ಸಹ ಕಂಡುಬಂದಿಲ್ಲ ಎಂದುಬರೆಯಲಾಗಿದೆ ಎಂದರೆ ಅದು ತುಂಬಾ ದಿನವಾಗಿದ್ದರಿಂದ ಆ ಅಂಶ ಕಂಡು ಬಂದಿರುವುದಿಲ್ಲ . ಅದನ್ನು ಎಲ್ಲಿ ಬರೆಯಲಾಗಿದೆ ಎಂದರೆ ಸಾಕ್ಷಿ ಕಡತ ನೋಡಿ ಇಲ್ಲ ಎಂದು ನುಡಿಯತ್ತಾರೆ . ತುಂಬಾ ದಿನ ವಾಗಿದ್ದರಿಂದ FSL ವರದಿ ನೆಗೆಟಿವ ಎಂದು ಬಂದಿರುತ್ತದೆ ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ . ಈ ಸ್ಯಾಂಪಲ್ ಗಳ ಮೇಲೆ ನೀವು ಹೊನ್ನಾವರ RFO ರವರ ಶೀಲು ಹಾಕಿ ಕಳುಹಿಸಿ ಕೊಟ್ಟಿರುವುದಿಲ್ಲ ಎಂದರೆ ಆ ರೀತಿಯಾಗಿ ಕಳುಹಿಸಿಕೊಟ್ಟಿಲ್ಲ . ಸಾಕ್ಷಿ ಪುನಃ ಅಂಕೋಲಾ RFO ರವರ ಶೀಲು ಹಾಕಿ ಕಳುಹಿಸಿ ಕೊಟ್ಟಿರುತ್ತೇವೆ . FSL ವರದಿಗಳು ನಮ್ಮ ಪ್ರಭಾವಕ್ಕೆ ಒಳಗಾಗಿ ನೀಡಿದ ಸಂಸ್ಥೆ ಗಳಾಗಿರುತ್ತದೆ ಎಂದರೆ ಸರಿಯಲ್ಲ .

8. Article ನಂ 1 ರಮೇಲೆ RFO ಹೊನ್ನಾವರ ರವರ ಶೀಲು ಹಾಕಿರುತ್ತಿರೊ ಎಂದರೆ RFO ಅಂಕಕೋಲಾ ರವರ ಶೀಲು ಹಾಕಲಾಗಿರುತ್ತದೆ .

9. Article ನಂ 2 ರಮೇಲೆ RFO ಹೊನ್ನಾವರ ರವರ ಶೀಲು ಹಾಕಿರುತ್ತಿರೊ ಎಂದರೆ RFO ಅಂಕಕೋಲಾ ರವರ ಶೀಲು ಹಾಕಲಾಗಿರುತ್ತದೆ . ಚರ್ಮ ಸ್ಯಾಂಪಲ ಹಾಗೂ ಗುಂಡು ತಗುಲಿದ ಚರ್ಮ ವನ್ನು FSL ಮಡಿವಾಳ ಬೆಂಗಳೂರಿಗೆ ಕಳುಹಿಸಿ ಕೊಡಲಾಗಿರುತ್ತದೆ. ಷದ್ರಿ ಸ್ಯಾಂಪಲಗಳನ್ನು ಕಳುಹಿಸುವಾಗ ಮೂಲ ಪಂಚನಾಮೆಯನ್ನು ಕಳುಹಿಸಿ ಕೊಡಲಾಗುತ್ತಿದೆ ಎಂದು ವರದಿಯಲ್ಲಿ ನಮೂದಿಸಿ ಕಳುಹಿಸಿ ಕೊಟ್ಟಿರುತ್ತಿರಾ ಎಂದರೆ ಆ ರೀತಿ ಬರೆದು ಕಳುಹಿಸಿ ಕೊಟಿಲ್ಲ . ಸ್ಯಾಂಪಲ ಗಳನ್ನು ಕಳುಹಿಸಿ ಕೊಡುವಾಗ ಮೂಲ ಪಂಚನಾವೆಯನ್ನು ಹಾಕಿ ಕಳುಹಿಸಿ ಕೊಟ್ಟಿದ್ದೆವು ಆ ಮೂಲ ಪಂಚನಾಮೆ ಚಾರ್ಜ ಶೀಟು ಹಾಕುವಾಗ ಸಿಗುತ್ತಿಲ್ಲ ಆ ಕಾರಣದಿಂದ ಆ ಮೂಲ ಪಂಚನಾಮೆಯನ್ನು ನಮಗೆ ವಾಪಸ್ಸು ಕಳುಹಿಸಿ ಕೊಡಿ ಎಂದು ನೀವು ಪತ್ರವನ್ನು ಬರೆದಿರುತ್ತೀರಾ ಎಂದರೆ ಇಲ್ಲ . ಮೂಲ ಪಂಚನಾಮೆಯನ್ನು ಸ್ಯಾಂಪಲ್ ನೊದಿಗೆ FSL ನೊಂದಿಗೆ ಕಳುಹಿಸಿ ಕೊಡುವ ಅವಶ್ಯಕತೆ ಇಲ್ಲ ಎಂದರೆ ಅವರು ಕೇಳಿದ್ದಕ್ಕೆ ಕಳುಹಿಸಿ ಕೊಟ್ಟಿರುತ್ತೇನೆ . FSL ಗೆ ಕಳಹಿಸಿ ಕೊಡುವ ಪೂರ್ವದಲ್ಲಿ ಎಷ್ಟು ಸಲ ಅವರೊಂದಿಗೆ ಸಂಪರ್ಕ ಮಾಡಿರುತ್ತೀರಿ ಎಂದರೆ ನಾವು ಯವುದೇ ಸಂಪರ್ಕ ಮಾಡಿಲ್ಲ . ಯಾವುದೆ ಸಂಪರ್ಕ ಮಾಡದೆ ಮೂಲ ಪಂಚನಾಮೆ ಕೊಡಿ ಎಂದು ಯಾವ ದಿನಾಕಂದಂದು ನಿಮ್ಮ ಬಳಿ ಕೇಳಿರುತ್ತಾರೆ ಎಂದರೆ ನನಗೆ ನೆನಪಿಲ್ಲ . ಷದ್ರಿ ಮೂಲ ಪಂಚನಾವೆಯನ್ನು ಪರಿಕರಗಳು ಎಲ್ಲಿ ಇರುತ್ತದೆ ಅಲ್ಲಿ ಮಾಡುತ್ತೇವೆ . ಅದನ್ನು ನಿರ್ದಿಷ್ಟವಾಗಿ ಎಲ್ಲಿ ಮಾಡಿರುತ್ತೀರಿ ಎಂದರೆ ಕಚೆರಿಯಲ್ಲಿ ಮಾಡಿರುತ್ತೇವೆ . ನಮ್ಮ ಕಚೇರಿಯಲ್ಲಿ 5–6 ಕೋಣೆಗಳು ಇರುತ್ತವೆ ಅವುಗಳಲ್ಲಿ ಯಾವ ಕೋಣೆ ಯಲ್ಲಿ ಪಂಚನಾಮೆ ಮಾಡಿರುತ್ತೆವೆ ಎಂದು ನನಗೆ ನೆನಪಿಲ್ಲ . ಉಳಿದ ಪರಿಕರಗಳನ್ನು ಹಾಗೂ ಸ್ಯಾಂಪಲಗಳನ್ನು ರೆಕಾರ್ಡ ರೂಮದಲ್ಲಿ ಇಟ್ಟಿಲ್ಲ . ಅವುಗಳನ್ನು ನಮ್ಮ ಸುರ್ಪದಿಯಲ್ಲಿ ಇಟ್ಟು ಕೊಂಡಿರುತ್ತೇವೆ . FSL ಮಡಿವಾಳ ಗೆ

ಕಳುಹಿಸಿದೆವು ಎನ್ನಲಾದ ಸೂಚನಾ ಪತ್ರ ಮತ್ತು ಕೋರಿಕೆ ಪತ್ರದಲ್ಲಿ ಮೂಲ ಪಂಚನಾಮೆಯನ್ನು ಇದರೊಂದಿಗೆ ಕಳುಹಿಸಿ ಕೊಡುತ್ತೇವೆ ಎಂದು ನಮೂದಿಸಿರುವುದಿಲ್ಲ . ಮೂಲ ಪಂಚನಾಮೆ ಸಾಕ್ಷಿಯ ವಿಚಾರಣೆ ಸಮಯದಲ್ಲಿ ಬೇಕಾಗುತ್ತದೆ ಎಂದು ನನ್ನ ತನಿಖೆ ಕಾಲಕ್ಕೆ ಗೊತ್ತಿತ್ತು . ಚಾರ್ಜ ಶಿಟ್ ನ ಯಾವ ಭಾಗದಲ್ಲೂ ಸಹ ಮೂಲ ಪಂಚನಾಮೆ ಯನ್ನು FSL ಮಡಿವಾಳಕ್ಕೆ ಕಳುಹಿಸಿ ಕೊಟ್ಟಿದ್ದೆವು ಅದು ವಾಪಸ್ಸು ಬಂದಿಲ್ಲ ಎಂದು ಬರೆಯಲಿಲ್ಲ ಎಂದರೆ ಸರಿ . ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳು ಮತ್ತು ಮಾದರಿಗಳು ಅರೋಪಿಗೆ ಸಂಬಧಿಸಿದ್ದು ಅಲ್ಲ ಎಂದು ನಿಮಗೆ ಗೊತ್ತಿತ್ತು ಆದರೂ ಸಹ ನೀವು ಅರೋಪಿತರ ವಿರುದ್ಧ ಅಂತಿಮ ವರದಿ ಯನ್ನು ಸಲ್ಲಿಸಿರುತ್ತಿರಿ ಎಂದರೆ ಸರಿಯಲ್ಲ . FSL ವರದಿಗಳು ಈ ಪ್ರಕರಣಕ್ಕೆ ಪೂರಕವಾಗಿ ಬಂದಿಲ್ಲ ಎಂದು ಗೊತ್ತಿದ್ದು ಸಹ ನೀವು ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಆರೋಪಿತರ ವಿರುದ್ಧ ಹಾಕಿರುತ್ತೀರಿ ಎಂದರೆ ಸರಿಯಲ್ಲ . 4 ಮತ್ತು 5 ನೇ ಆರೋಪಿತರು ಸ್ವ ಖುಷಿ ಹೇಳಿಕೆ ನುಡಿದಿರುತ್ತಾರೆ ಎಂದು ನೀವೆ ಅದನ್ನು ಸೃಷ್ಟಿ ಮಾಡಿ ಕೊಂಡದ್ದು ಎಂದರೆ ಸರಿಯಲ್ಲ . 1 ರಿಂದ 3 ಆರೋಪಿತರು ಸಹ ನನ್ನ ಮುಂದೆ ಸ್ವ ಖುಷಿ ಹೇಳಿಕೆ ಕೊಟ್ಟದು ಇಲ್ಲ ಎಂದರೆ ಸರಿಯಲ್ಲ . 4 ಮತ್ತು 5 ನೇ ಆರೋಪಿತರು ಹೇಳಿದರೂ ಎನ್ನಲಾದ ಸ್ವ ಖುಷಿ ಹೇಳಿಕೆಯಲ್ಲಿ ತಾವು ಗುನ್ನೆ ಮಾಡಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ . ನೀವು ನ್ಯಾಯಾಲಯದ ಮುಂದೆ ಕಡತದ ಅದಾರದ ಮೇಲೆ ಕೆವಲ ಸಾಕ್ಶ್ಯ ನುಡಿದಿರುತಿತೇರಿ ಅದರ ಹೊರತಾಗಿ ನಿಮಗೆ ನೀವು ಹೇಳುವಂತಹ ಗುನ್ನೆ ಕುರಿತಾಗಿ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ . ನಿಮ್ಮ ತನಿಖೆಕಾಲಕ್ಕೆ ನಡ ಬಂದೂಕು ಎಲ್ಲಿ ತಯಾರಿಸಲಾಗಿತ್ತು ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಇಲ್ಲ . ನಾಡಬಂದೂಕಿನ ತಯಾರಕರನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕ್ರಮವನ್ನು ಕೈಗೊಂಡಿರುತ್ತೀರಾ ಎಂದರೆ ಇಲ್ಲ . ನಾಡಬಂದೂಕು ಎನ್ನುವ ಬೇನಾಮಿ ಆಸ್ತಿಯನ್ನು ಉಪಯೋಗಿಸಿ ಕೊಂಡು ಸುಳ್ಳು ಪ್ರಕರಣ ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ . ಕಡವೆ ಆಗಲಿ ಅಥವಾ ಇನ್ನಿತರ ಯಾವುದೆ ಪ್ರಾಣಿಗಳಾಗಲಿ

ಸಾಮಾನ್ಯವಾಗಿ ಪ್ರಸವದ ವೇಳೇಯಲ್ಲಿ ಸಾವನ್ನಪ್ಪುವ ಸಾಧ್ಯತೆ ಇರುತ್ತದೆ ಎಂದರೆ ಇರಬಹುದು . ಪ್ರಸವದ ವೇಳೆಯಲ್ಲಿ ಸತ್ತ ಕಡವೇ ಉಪಯೋಗಿಸಿಕೊಂಡು ಇಲಾಖಾ ಅಂಕಿ ಅಂಶಕೋಸ್ಕರ ಸದ್ರಿ ಪ್ರಕರಣ ಸೃಷ್ಟಿ ಮಾಡಿದ್ದು ಎಂದರೆ ಸರಿಯಲ್ಲ . ತನಿಖೆಯ ಕಾಲದಲ್ಲಿ ಆರೋಪಿತರು ಮುಗ್ದರು ಮತ್ತು ಯಾವುದೇ ತಪ್ಪನ್ನು ಮಾಡಿಲ್ಲ ಎಂದು ಕಂಡು ಬಂದಿದ್ದರೆ ಅರೋಪಿತರ ವಿರುದ್ದ ಸುಳ್ಳು ಅಂತಿಮ ವರದಿ ಹಾಕಿರುತ್ತೀರಿ ಎಂದರೆ ಸರಿಯಲ್ಲ . ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ನಿಶಾನೆಗೊಂಡ ದಾಖಲಾತಿಗಳು ಈ ಪ್ರಕರಣಕ್ಕೆ ಪೂರಕವಾಗಿ ಸೃಷ್ಟಿ ಮಾಡಿ ಕೊಂಡ ದಾಖಲಾತಿಗಳು ಎಂದರೆ ಸರಿಯಲ್ಲ. ನೀವು ಮತ್ತು ನಿಮ್ಮ ಸಿಬ್ಬಂದಿಗಳು ಸ್ದಳಕ್ಕೆ ಹೋಗಿದ್ದು ಇಲ್ಲ ಯಾವುದು ವಸ್ತು ಗಳನ್ನು ಅಮಾನತ್ತು ಪಡಿಸಿಕೊಂಡಿದ್ದು ಇಲ್ಲ . ಪಂಚನಾಮೆ ಮಾಡಿದ್ದು ಇಲ್ಲ . ಹಾಗೂ ಮಾದರಿಗಾಗಿ ಸ್ಯಾಂಪಲ ಪಡೆದುಕೊಂಡು FSL ಗೆ ಕಳುಹಿಸಿದ್ದು ಇಲ್ಲ ಎಂದರೆ ಸರಿಯಲ್ಲ . FSL ವರದಿ ಸಹ ಈ ಪ್ರಕರಣಕ್ಕೆ ಪೂರಕವಾಗುವಂತೆ ನಮ್ಮ ಪ್ರಭಾವದಿಂದ ಸೃಷ್ಟಿಸಿಕೊಡದ್ದು ಎಂದರೆ ಸರಿಯಲ್ಲ . ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ . ಈ ಪರಕಣಕ್ಕೆ ಪೂರಕವಾಗುಂತೆ ಪೊಟೊ ಮತ್ತು ಸಿಡಿ ಹಾಗೂ ಮುದ್ದೆಮಾಲುಗಳನ್ನು ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ . ಇಲಾಖೆಯ ಸ್ಬಿಂದಿಗಳನ್ನು ಹೊರತು ಪಡಿಸಿ ಸ್ವತಂತ್ರವಾದ ಸಾಕ್ಷಿದಾರರನ್ನು ಕಲೆ ಹಾಕುವ ಯಾವುದೇ ಪ್ರಯತ್ನ ನೀವು ಮಾಡಿದ್ದು ಇಲ್ಲ ಎಂದರೆ ಸರಿಯಲ್ಲ .

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.